## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಪರಮದೇವನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಮೇಟಿ ಹಂಪಮ್ಮ, ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ವಿಚಾರಣಾಧಿಕಾರಿಗಳು ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ಪತ್ರ ಸಂಖ್ಯೆ:ಕಂ/ಪ್ರಾಆಕ/ಜಿಪಂ/128/2018-19/883, ದಿನಾಂಕ: 27.05.2019.
2) ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ಇವರ ವಿಚಾರಣಾ ನೋಟಿಸ್‌ಗಳು, ದಿನಾಂಕ: 13.03.2019.
3) ಶ್ರೀಮತಿ ಮೇಟಿ ಹಂಪಮ್ಮ, ಪರಮದೇವನಹಳ್ಳಿ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ಕಾರಣ ಕೇಳುವ ನೋಟೀಸ್‌ಗೆ ಲಿಖಿತ ಹೇಳಿಕೆ, ದಿನಾಂಕ:26.03.2019.

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರಲ್ಲಿ ಶ್ರೀಮತಿ ಮೇಟಿ ಹಂಪಮ್ಮ, ಪರಮದೇವನಹಳ್ಳಿ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ ಇವರು ನಿಯಮ ಬಾಹಿರವಾಗಿ ತಮ್ಮ ಮಗನಿಗೆ ಹಣ ಪಾವತಿಸಿ ಆರ್ಥಿಕ ದುರ್ನಡತೆ ಎಸಗಿರುವುದರಿಂದ ಇವರ ವಿರುದ್ಧ ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ)(1) ಪ್ರಕಾರ ಕ್ರಮ ಜರುಗಿಸುವ ಕುರಿತು ವಿಚಾರಣಾಧಿಕಾರಿ ಹಾಗೂ ಪ್ರಾದೇಶಿಕ ಆಯುಕ್ತರು, ಕಲಬುರಗಿ ವಿಭಾಗ, ಕಲಬುರಗಿ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ, 1993 ರ ಪ್ರಕರಣ 43-ಎ(iii) ಮತ್ತು 48(4) ರಡಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟೀಸನ್ನು ದಿನಾಂಕ: 13-03-2019 ರಂದು ಜಾರಿ ಮಾಡಲಾಗಿರುತ್ತದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3) ರಲ್ಲಿ ಸದರಿಯವರು ಕಾರಣ ಕೇಳುವ ನೋಟೀಸಿಗೆ ತಮ್ಮ ವಕೀಲರ ಮೂಲಕ ಈ ಕೆಳಕಂಡಂತೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ದೂರುದಾರಾದ ಶ್ರೀ ಸರಸ್ವತಿ ಗಂಡ ಗೂಳನ ಗೌಡ ಇವರು ಪರಮದೇವನಹಳ್ಳಿ ಗ್ರಾಮದ ವಾಸಸ್ಥರಾಗಿದ್ದು ಹಾಗೂ ಸದರಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿರುತ್ತಾರೆ. ತಮ್ಮ ಕಕ್ಷಿದಾರರಾದ ಶ್ರೀಮತಿ ಮೇಟಿ ಹಂಪಮ್ಮ ರವರು ಅಧ್ಯಕ್ಷರಾದ ದಿನದಿಂದಲೂ ದೂರುದಾರರು ಹಾಗೂ ತಮ್ಮ ಕಕ್ಷಿದಾರರಿಗೆ ಅಧ್ಯಕ್ಷ ಸ್ಥಾನ ವಿಚಾರವಾಗಿ ಒಳ ಮನಸ್ತಾಪಗಳು ಇದ್ದು ದೂರುದಾರರು ತಮ್ಮ ಕಕ್ಷಿದಾರರಿಗೆ ಕಿರುಕುಳ ನೀಡುವ ಉದ್ದೇಶದಿಂದ ಹಾಗೂ ಕಾನೂನು ಬಾಹಿರವಾಗಿ ಅಧ್ಯಕ್ಷೀಯ ಪದವಿಯಿಂದ ಕೆಳಗಿಳಿಸಲು ಸುಳ್ಳು ದೋಷಾರೋಪಗಳನ್ನು ನೀಡಿರುತ್ತಾರೆಂದು ಹಾಗೂ ದಿನಾಂಕ:27.10.2016ರಂದು ನಡೆದ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಕೈಗೊಂಡ ತೀರ್ಮಾನಗಳಿಗೆ, ನಡವಳಿಗಳಿಗೆ ಇವರು ಸದರಿ ದೂರುದಾರರು ಸಮ್ಮತಿಸಿ ಸಹಿ ಮಾಡಿರುತ್ತಾರೆ ಮತ್ತು ಸದರಿ ಅಧ್ಯಕ್ಷರು ಅನಕ್ಷಸ್ಥರಾದ ಕಾರಣ ಹೇಗಾದರೂ ಮಾಡಿ ಕಾನೂನು ಬಾಹಿರವಾಗಿ ಅಧ್ಯಕ್ಷಕೀಯ ಸ್ಥಾನದಿಂದ ಕೆಳಗಿಸಬೇಕೆಂಬ ದುರುದ್ದೇಶದಿಂದ ಸುಳ್ಳು ಅರೋಪಗಳನ್ನು ನೀಡಿರುತ್ತಾರೆಂದು ಇಂತಹ ಸತ್ಯಕ್ಕೆ ದೂರವಾದ ದೂರುಗಳನ್ನು ಪರಿಗಣಿಸಬಾರದೆಂದು ಲಿಖಿತ ಹೇಳಿಕೆಯನ್ನು ನೀಡಿರುತ್ತಾರೆ.

.....2

**ವಿಚಾರಣಾ ಅಧಿಕಾರಿಗಳ ಅಂಶಗಳು:-**

ಪರಮದೇವನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷರಾದ ಶ್ರೀಮತಿ ಮೇಟಿ ಹಂಪಮ್ಮ ಇವರ ಆಧ್ಯಕ್ಷತೆಯಲ್ಲಿ ದಿನಾಂಕ: 27-10-2016ರಂದು ಜರುಗಿದ ಸಾಮಾನ್ಯ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಕುರಿತು ಚರ್ಚಿಸಿ ತೀರ್ಮಾನಿಸಿರುವುದು ಕಂಡು ಬರುತ್ತದೆ.

- **ವಿಷಯಗಳ ಸಂಖ್ಯೆ: -5:-** ವೈಕಗಲ್ಲು ಗ್ರಾಮದಲ್ಲಿ ಬೀದಿ ದೀಪಗಳು ಸುಟ್ಟು ಹೋಗಿರುವ ಕುರಿತು ಚರ್ಚಿಸಿ, ಇವುಗಳನ್ನು ಅಧ್ಯಕ್ಷರೇ ಹಾಕಿಸಿ ಅವರೇ ಬಿಲ್ ತೆಗೆದುಕೊಳ್ಳಲಿ ಎಂದು ಸರ್ವ ಸದಸ್ಯರು ತೀರ್ಮಾನಿಸಿರುವುದು.
- **ವಿಷಯ ಸಂಖ್ಯೆ:-6:-** ಕಚೇರಿ ಲೇಖನ ಸಾಮಾಗ್ರಿ ಮತ್ತು ಬಿಎಸ್‌ಎನ್‌ಎಲ್ ಬಿಲ್ ಪಾವತಿ ಕುರಿತು ಚರ್ಚಿಸಿ ವರ್ಗ-1ರಲ್ಲಿ ಪಾವತಿಸಲು ತೆರಿಗೆ ವಸೂಲಿ ಕಡಿಮೆ ಇದ್ದು, ಅಧ್ಯಕ್ಷರು ನಗದು ಮೊತ್ತ ನೀಡಿ ಬಿಲ್ ಪಾವತಿಸಿ ಮುಂದಿನ ದಿನಗಳಲ್ಲಿ ತೆಗೆದುಕೊಳ್ಳಲು ಸರ್ವ ಸದಸ್ಯರು ತೀರ್ಮಾನಿಸಿರುವುದು.
- **ವಿಷಯ ಸಂಖ್ಯೆ-7:-** ಹಗಾ ಗ್ರಾಮಕ್ಕೆ ಹೊಸ ಪಂಪ ಮೋಟರ್ ಖರೀದಿಸುವ ಕುರಿತು ಚರ್ಚಿಸಿ, ಆಧ್ಯಕ್ಷರೇ ಕೊಡಿಸಲಿ ಎಂದು ಸರ್ವ ಸದಸ್ಯರು ತೀರ್ಮಾನಿಸಿರುವುದು.
- **ವಿಷಯ ಸಂಖ್ಯೆ-8:-** ವೈಕಗಲ್ಲು ಗ್ರಾಮದಲ್ಲಿ ಕುಡಿಯುವ ನೀರಿನ ಬೋರ್ ಹತ್ತಿರ ನೀರು ನಿಲ್ಲಿಸುವ ಕುರಿತು ಚರ್ಚಿಸಿ, ಜೆ.ಸಿ.ಬಿ ಯಿಂದ ಮರಳು ಹಾಕಲು ಸಭೆಯಲ್ಲಿ ತಿಳಿಸಿದ ಪ್ರಕಾರ ಆಧ್ಯಕ್ಷರ ಮಗನಾದ ಶ್ರೀ ಪಿಡ್ಡನಗೌಡ ಇವರಿಗೆ ಒಪ್ಪಿಸಿ ಕೆಲಸ ಮಾಡಿಸಲು ಎಂದು ಸರ್ವ ಸದಸ್ಯರು ತೀರ್ಮಾನಿಸಿರುವುದು.
- ಸದರಿ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮೇಟಿ ಹಂಪಮ್ಮ ಇವರ ಮಗನಾದ ಶ್ರೀ ಪಿಡ್ಡನಗೌಡ ಇವರ ಹೆಸರಿಗೆ ಚೆಕ್ ಸಂಖ್ಯೆ: 44212601 ದಿನಾಂಕ: 10/04/2017ರ ಮೂಲಕ ರೂ.10,000/-, ಚೆಕ್ ಸಂಖ್ಯೆ: 44212602 ದಿನಾಂಕ: 10/04/2017ರ ಮೂಲಕ ರೂ. 16,000/-, ಚೆಕ್ ಸಂಖ್ಯೆ:44212607 ದಿನಾಂಕ: 25/05/2017ರ ಮೂಲಕ ರೂ.24,000/- ಹಾಗೂ ಚೆಕ್ ಸಂಖ್ಯೆ: 42962887 ದಿನಾಂಕ:25/09/2017ರ ಮೂಲಕ ರೂ. 42,000/-ಗಳನ್ನು ಸಿಂಡಿಕೇಟ್ ಬ್ಯಾಂಕಿನಿಂದ ಡ್ರಾ ಆಗಿರುವುದು ಕಂಡು ಬರುತ್ತದೆ.
- 2016-17ನೇ ಸಾಲಿನ ತೆರಿಗೆ ವಸೂಲಾತಿ ಖಾತೆಯ ಸಾದಿಲ್ವಾರು ಬಿಲ್‌ನ ಮೂಲಕ ದಿನಾಂಕ: 28/08/2018ರಂದು ಒಟ್ಟು ರೂ.38,586/-ಗಳನ್ನು ಪಾವತಿಸಿರುವುದು ಕಂಡು ಬರುತ್ತದೆ.
- ದಿನಾಂಕ:27/10/2016ರಂದು ಜರುಗಿದ ಸಾಮಾನ್ಯ ಸಭೆಯ ನಡವಳಿಗೆ ಈ ಪ್ರಕರಣದಲ್ಲಿ ದೂರು ಸಲ್ಲಿಸಿದ ಸದರಿ ಗ್ರಾಮ ಪಂಚಾಯಿತಿಯ ಸದಸ್ಯರಾದ ಶ್ರೀಮತಿ ಸರಸ್ವತಿ ಗೂಳನಗೌಡ ಇವರು ಸಹ ಸದರಿ ವಿಷಯಗಳ ತೀರ್ಮಾನಕ್ಕೆ ಒಪ್ಪಿ ಸಹಿ ಮಾಡಿರುವುದು ಕಂಡು ಬರುತ್ತದೆ.

ಶ್ರೀಮತಿ ಮೇಟಿ ಹಂಪಮ್ಮ ಇವರು ತಮ್ಮ ಮಗನಾದ ಶ್ರೀ ಪಿಡ್ಡನಗೌಡ ಇವರಿಗೆ ಬೀದಿ ದೀಪಗಳ ಖರೀದಿ, ಲೇಖನ ಸಾಮಾಗ್ರಿ ಮತ್ತು ಬಿಎಸ್‌ಎನ್‌ಎಲ್ ಬಿಲ್ ಪಾವತಿ, ಹೊಸ ಪಂಪ ಮೋಟಾರ್ ಖರೀದಿ ಮತ್ತು ಬೋರ್‌ವೆಲ್ ಹತ್ತಿರ ನೀರು ನಿಲ್ಲಿಸಲು ಮರಳು ಹಾಕಿರುವುದು ಈ ಕೆಲಸ ಕಾರ್ಯಗಳಿಗಾಗಿ ಖರ್ಚು ಮಾಡಿದ ಒಟ್ಟು ಮೊತ್ತ ರೂ. 1,30,586/- ಗಳನ್ನು ಪಾವತಿಸಿರುವುದು ಸಂಬಂಧಪಟ್ಟ ದಾಖಲಾತಿಗಳಿಂದ ಮೇಲ್ನೋಟಕ್ಕೆ ಕಂಡು ಬರುತ್ತದೆ ಅಲ್ಲದೇ ಸದರಿ ಕೆಲಸ ಕಾರ್ಯಗಳಿಗಾಗಿ ಹಣವನ್ನು ಖರ್ಚು ಮಾಡುವ ಸಂಬಂಧ ದಿನಾಂಕ: 27.10.206ರಂದು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಸರ್ವ ಸದಸ್ಯರ ಒಪ್ಪಿಗೆ ಮೇರೆಗೆ ಖರ್ಚು ಮಾಡಲಾಗಿರುತ್ತದೆಂದು ತಾವೇ ತಮ್ಮ ಸ್ವತ: ಲಿಖಿತ ಹೇಳಿಕೆಯಲ್ಲಿ ಒಪ್ಪಿಕೊಂಡಿರುತ್ತಾರೆ.

......3

"ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ)(1)(v) ರನ್ವಯ ಪಂಚಾಯತ್‌ನ ಯಾವುದೇ ಬೇರೆ ರೀತಿಯ ಕಾಮಗಾರಿಯನ್ನು ಕಾರ್ಯಗತಗೊಳಿಸುವಾಗ, ಕರಾರು ಸಂಬಂಧ ಅಥವಾ ಕಾಮಗಾರಿಗೆ ಸಂಬಂಧಿಸಿದ ಯಾವುದೇ ವ್ಯವಹಾರದಲ್ಲಿ ಕುಟುಂಬದ ಹತ್ತಿರದ ಸಂಬಂಧಿಯಾಗಿರುವ ಯಾವೊಬ್ಬ ವ್ಯಕ್ತಿಯೊಂದಿಗೆ ಪ್ರತ್ಯಕ್ಷವಾಗಿ ತೊಡಗಿರುವುದು ಕಂಡು ಬಂದರೆ ಅಥವಾ ಪಾಲಿದಾರನಂತೆ, ನೌಕರನಂತೆ ಅಥವಾ ಅಂಥ ಅನ್ಯಥಾ ಸಂಘ ಸಂಸ್ಥೆ ಮಂಡಲಿಯಲ್ಲಿ ಸದಸ್ಯನಂತೆ ಸಹಭಾಗಿಯಾಗಿರುವನೆಂದು ಕಂಡುಬಂದರೆ, ಅವನಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ನೀಡಿದ ನಂತರ ಮತ್ತು ಅಗತ್ಯವೆಂದು ತಾನು ಭಾವಿಸಿದಂತ ವಿಚಾರಣೆ ಮಾಡಿದ ನಂತರ ತೆಗೆದು ಹಾಕುವುದು ಸೂಕ್ತವೆಂದು ಭಾವಿಸಿದ್ದರೆ ಆ ಸದಸ್ಯನನ್ನು ಆತನ ಸದಸ್ಯತ್ವದಿಂದ ತೆಗೆದುಹಾಕಬಹುದು."

ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕಿನ, ಪರಮದೇವನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಮೇಟಿ ಹಂಪಮ್ಮ ಒಂದು ಜವಾಬ್ದಾರಿಯುತ ಹುದ್ದೆಯಲ್ಲಿದ್ದು, 2016-16ನೇ ಸಾಲಿನ 14ನೇ ಹಣಕಾಸು ಯೋಜನೆಯಡಿ ವಿದ್ಯುತ್ ಉಪಕರಣಗಳ ಖರೀದಿಯಲ್ಲಿ ಮತ್ತು ತೆರಿಗೆ ವಸೂಲಾತಿ ಮೊತ್ತದ ಸಾದಿಲ್ವಾರು ಬಿಲ್‌ನಡಿ ಸಂಬಂಧಿಸಿದವರಿಗೆ ಬಿಲ್ಲುಗಳ ಮೊತ್ತವನ್ನು ಪಾವತಿಸದೇ ತಮ್ಮ ಮಗನಾದ ಶ್ರೀ ಪಿಡ್ಡನಗೌಡ ಇವರಿಗೆ ರೂ.1,30,586/-ಗಳನ್ನು ಪಾವತಿಸಿ ಆರ್ಥಿಕ ದುರ್ನಡತೆ ಎಸಗಿರುವುದು ಸಂಬಂಧಪಟ್ಟ ದಾಖಲಾತಿಗಳಿಂದ ಸಾಬೀತಾಗಿರುವ ಹಿನ್ನೆಲೆಯಲ್ಲಿ ಸದರಿ ದುರುಪಯೋಗವಾದ ಒಟ್ಟು ಮೊತ್ತವನ್ನು ಕರ್ನಾಟಕ ಭೂ ಕಂದಾಯ ಬಾಕಿ ಪ್ರಕ್ರಿಯ ಮೂಲಕ ಬಡ್ಡಿ ಸಹಿತವಾಗಿ ವಸೂಲಾತಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಇವರಿಗೆ ನಿಯಮಾನುಸಾರ ವಸೂಲು ಮಾಡಲು ಸೂಚಿಸಿದೆ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಪರಮದೇವನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಮೇಟಿ ಹಂಪಮ್ಮ ಇವರನ್ನು ಅಧ್ಯಕ್ಷ ಮತ್ತು ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/930/ಗ್ರಾಪಂಅ/2018**
**ಬೆಂಗಳೂರು, ದಿನಾಂಕ:21-10-2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಪರಮದೇವನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಮೇಟಿ ಹಂಪಮ್ಮ ಇವರು ತಮ್ಮ ಮಗನಾದ ಶ್ರೀ ಪಿಡ್ಡನಗೌಡ ಇವರಿಗೆ ರೂ.1,30,586/-ಗಳನ್ನು ನಿಯಮಾಬಾಹಿರವಾಗಿ ಪಾವತಿಸಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ)(1)(v)ನ್ನು ಸ್ಪಷ್ಟವಾಗಿ ಉಲ್ಲಂಘಿಸಿ, ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿ ಸರ್ಕಾರಕ್ಕೆ ಒಟ್ಟು ರೂ. 1,30,586/-ಗಳ ಆರ್ಥಿಕ ನಷ್ಟ ಉಂಟುಮಾಡಿರುವುದರಿಂದ ಸದರಿ ಮೊತ್ತವನ್ನು ಕರ್ನಾಟಕ ಭೂ ಕಂದಾಯ ಬಾಕಿ ಪ್ರಕ್ರಿಯೆ ಮೂಲಕ ಬಡ್ಡಿ ಸಹಿತವಾಗಿ ನಿಯಮಾನುಸಾರ ವಸೂಲು ಮಾಡಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಬಳ್ಳಾರಿ ರವರಿಗೆ ಸೂಚಿಸಿದೆ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಪರಮದೇವನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ಮೇಟಿ ಹಂಪಮ್ಮ ಇವರನ್ನು ಅಧ್ಯಕ್ಷ ಮತ್ತು ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

Narayan Dep.
22/10/19

(ಡಿ.ಜಿ. ನಾರಾಯಣ)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ.)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

**ಗೆ:**

1. ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗ, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು.

2. ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಬಳ್ಳಾರಿ ಜಿಲ್ಲೆ.
3. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಬಳ್ಳಾರಿ, ಬಳ್ಳಾರಿ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಪರಮದೇವನಹಳ್ಳಿ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
5. ಶ್ರೀಮತಿ ಮೇಟಿ ಹಂಪಮ್ಮ, ಪರಮದೇವನಹಳ್ಳಿ ಗ್ರಾಮ ಪಂಚಾಯಿತಿ, ಬಳ್ಳಾರಿ ತಾಲ್ಲೂಕು, ಬಳ್ಳಾರಿ ಜಿಲ್ಲೆ.
6. ಗಣಕ ಕೋಶ-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7. ಕಛೇರಿ ಪ್ರತಿ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು(ಪಂ.ರಾಜ್-1) ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.

******